ಇದನ್ನು ಡಿಸೈಡ್ ಮಾಡಬೇಕು ಆದ್ದರಿಂದ ಆ ಸಮಿತಿಯ ರಿಪೋರ್ಟ್ ಬಂದ ಮೇಲೆ ಇದನ್ನು ಪರಿಶೀಲನೆ ಮಾಡುತ್ತೇವೆ.

ಬೆಳವಾಡಿ ಮಲ್ಲಮ್ಮನ ಪ್ರತಿಮೆಯನ್ನು ನಿರ್ಮಿಸುವ ಬಗ್ಗೆ ಕುರಿತು

2600 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಯುವಜನ ಸೇವಾ ಕ್ರೀಡೆ ಮತ್ತು ಕನ್ನಡ ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಬೆಲಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಬೆಳವಾಡಿಯಲ್ಲಿ ಬ್ರಿಟಿಷರ ದಾಸ್ಯ ಸಂಕೋಲೆಯ ವಿರುದ್ಧ ಹೋರಾಡಿ ಮಡಿದ ಬೆಳವಡಿ ಮಲ್ಲಮ್ಮನ ಪ್ರತಿಮೆಯನ್ನು ನಿರ್ಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ಹಾಗೂ ಅದು ಈಗ ಯಾವ ಹಂತದಲ್ಲಿದೆ.

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡೆ ಮತ್ತು ಕನ್ನಡ ಸಂಸ್ಕೃತಿ ಸಚಿವರು)

ಬೆಳವಾಡಿ ಮಲ್ಲಮ್ಮನ ಪ್ರತಿಮೆಯನ್ನು ನಿರ್ಮಿಸುವ ಬಗ್ಗೆ ಸರ್ಕಾರದಲ್ಲಿ ಯಾವ ಪ್ರಸ್ತಾವನೆಯೂ ಇಲ್ಲ. ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಪರಿಷತ್ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಸಭಾಧ್ಯಕ್ಷರೇ ಬ್ರಿಟಿಷರ ವಿರುದ್ಧ ಹೋರಾಡಿದಂಥ ಮಲ್ಲಮ್ಮನ ಆ ಸ್ಥಳವನ್ನು ಅಭಿವೃದ್ಧಿಪಡಿಸಲಿಕ್ಕೆ ಸರ್ಕಾರದಿಂದ ಯಾವ ಅಭಿವೃದ್ಧಿ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆಯೆಂದು ಕೇಳಿದ್ದೇನೆ. ಅವರು ಇದು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರುವುದಿಲ್ಲ, ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ ಸರ್ಕಾರದವರು ಆ ಸ್ಥಳದ ಅಭಿವೃದ್ಧಿಗಾಗಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನೇರವಾಗಿ ಕೇಳಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ ಬೆಳವಾಡಿ ಮಲ್ಲಮ್ಮನವರು ಹೋರಾಟ ಮಾಡಿರತಕ್ಕಂಥ ವಿಚಾರ ಸತ್ಯವಿದೆ. ಅದರ ಬಗ್ಗೆ ಚರಿತ್ರೆ ಬಹಳ ಉದ್ದ ಇದೆ. ಆದರೆ ಕಾಲದ ಅಭಾವವಿರುವುದರಿಂದ ಈಗ ಅವರ ಬಗ್ಗೆ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ ಅಂಥವರ ಪ್ರತಿಮೆಯನ್ನು ನಿರ್ಮಾಣ ಮಾಡತಕ್ಕಂಥ ಸಲಹೆ ಯೋಗ್ಯ ಇದೆ. ಅದು ಇಲ್ಲವೆಂದು ನಾನು ಹೇಳುವುದಿಲ್ಲ ಈಗ ಸಧ್ಯಕ್ಕೆ ಈ ಪ್ರಸ್ತಾವನೆ ಸರ್ಕಾರದ ಮುಂದಿಲ್ಲವೆಂಬ ಮಾತನ್ನು ಹೇಳಿದ್ದೇನೆ. ಹೋರಾಟ ಮಾಡತಕ್ಕಂಥ ಅಂತಹ ಮಹಾನ್ ವ್ಯಕ್ತಿಗಳ ಪ್ರತಿಮೆಯನ್ನು ಹಾಕುವುದರಿಂದ ಪ್ರಸ್ತುತ ಮತ್ತು ಭವಿಷ್ಯದ ಪೀಳಿಗೆಗೆ ಅವು ಸ್ಫೂರ್ತಿ ಮಾರ್ಗದರ್ಶನ ನೀಡತಕ್ಕಂಥ ವಿಚಾರವಾಗುತ್ತವೆ. ಆದುದರಿಂದ ಸರ್ಕಾರ ಅದನ್ನು ಸೂಕ್ತವಾಗಿ ವಿಚಾರ ಮಾಡುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಶಿವಾನಂದ ಎಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೇ ಟೂರಿಸಂ ಇಲಾಖೆಯಿಂದ ಆರ್ಕಿಟೆಕ್ಟ್ ಪ್ಲಾನ್ ಮಾಡಿಸಲಾಗಿದೆ ಮಾಡಿಸಿದರೂ ಇನ್ನು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಈಗ ಅಲ್ಲಿ ಎನ್‌ಕ್ರೋಚ್‌ಮೆಂಟ್ ನಡೆದಿದೆ. ಆ ಎನ್‌ಕ್ರೋಚ್‌ಮೆಂಟ್ ಆಗದಂತೆ ಸರ್ಕಾರ ಕೂಡಲೇ ಯಾವ ಕ್ರಮ ಕೈಗೊಳ್ಳುತ್ತದೆ. ಇದನ್ನು ಎಷ್ಟು ದಿವಸಗಳಲ್ಲಿ ತಾವು ಮಾಡುತ್ತೀರಿ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ವಿವರಗಳು ಬೇಕಾಗುತ್ತದೆ. ವಿವರಗಳು ಬಂದ ನಂತರ ತಮಗೆ ಹೇಳುವುದಕ್ಕೆ ಸಾಧ್ಯವಾಗಹುದು. ಇದರ ಬಗ್ಗೆ ಬೇಕಾದರೆ ತಾವು ವಿವರ ತೆಗೆದುಕೊಂಡು ಬಂದರೆ ಸೂಕ್ತವಾಗಿ ಚರ್ಚೆ ಮಾಡುವುದಕ್ಕೆ ಸರ್ಕಾರ ಸಿದ್ದವಾಗಿದೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಈಗ ಕಿತ್ತೂರು ಚೆನ್ನಮ್ಮನ ಬಗ್ಗೆ ಮೊನ್ನೆ ಒಂದು ಡೆವಲಪ್‌ಮೆಂಟ್ ಕಮಿಟಿಯಲ್ಲಿ ಇದು ಬೈಲಹೊಂಗಲ ತಾಲ್ಲೂಕಿಗೆ ಬರುವುದರಿಂದ ಬೆಳವಡಿ ಮಲ್ಲಮ್ಮನ ವಿಚಾರವನ್ನು ಆ ಕಮಿಟಿಯಲ್ಲಿ ಕೂಡಿಸಿಟ್ಟರೆ ಎರಡು ಒಂದರಲ್ಲೇ ಆಗಿಬಿಡುತ್ತದೆ.

ಶ್ರೀ ಎಸ್. ಬಂಗಾರಪ್ಪ : ಸರ್ಕಾರಕ್ಕೆ ಅವೆರಡನ್ನು ಸೇರಿಸುವುದಕ್ಕೆ ಏನು ದೊಡ್ಡ ವಿಚಾರವಾಗುವುದಿಲ್ಲ ಆ ಪ್ರಶ್ನೆ ಅಲ್ಲ ಜಾಗ ಎಷ್ಟು? ಏನು ವಿಚಾರ ಮತ್ತು ಪ್ರತಿಮೆ ಆ ವಿವರಗಳನ್ನು ಪಡೆದು ನಂತರ ಸಮಿತಿಗೆ ವಹಿಸಬೇಕಾಗುತ್ತದೆ. ಆ ವಿವರವನ್ನು ಸರ್ಕಾರ ಪಡೆದ ನಂತರ.....

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ನನ್ನ ಅಪೇಕ್ಷೆ ಏನಿತ್ತು ಎಂದರೆ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸದಸ್ಯರು ಹೇಳಿಕೆ ಮತ್ತು ಕೇಳಿಕೆಗಳು ರೆಕಾರ್ಡ್‌ಗೆ ಹೋಗಬಾರದು ಎಂಬುದು ನನ್ನ ಇಚ್ಚೆ ಇತ್ತು. ಕಾರಣವೇನೆಂದರೆ ಈ ಬೆಳವಡಿ ಮಲ್ಲಮ್ಮ ಬ್ರಿಟಿಷರ ವಿರುದ್ಧ ಹೋರಾಟ ಮಾಡಿಲ್ಲ ಇತಿಹಾಸವನ್ನು ತಿರುಗಿಸುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸದಸ್ಯರು ಇತಿಹಾಸವನ್ನು ಓದಬೇಕು. ಶಿವಾಜಿ ಜೊತೆ ಹೋರಾಟ ಮಾಡಿದಂಥ ವೀರ ಮಹಿಳೆ ಈಕೆ ಶಿವಾಜಿ ಕೂಡ ಹೋರಾಟ ಮಾಡುವಾಗ ಈಶಪ್ರಭು ಎನ್ನತಕ್ಕಂಥ ಅವರ ಪತ್ನಿ ಮರಣವಾದ ನಂತರ ಈ ತಾಯಿ ನಾಡರಕ್ಷಣೆಗಾಗಿ ಖಡ್ಗ ತೆಗೆದುಕೊಂಡು ಯುದ್ಧ ಮಾಡಿದ ನಂತರ ಶಿವಾಜಿ ಈ ನಾಡಿನ ಸ್ವಾಭಿಮಾನದ ಪ್ರತೀಕ ತಾಯಿ ನೀನು ನಿನಗೆ ನಾನು ಶರಣು ಬಂದಿದ್ದೇನೆ ಎನ್ನತಕ್ಕಂಥ ಮಾತನ್ನಾಡಿ ಆಗ ಒಂದು ಭಾವನಾತ್ಮಕ ಘಟನೆ ಏನು ನಡೆದುಹೋಯಿತು ಆ ಇತಿಹಾಸವನ್ನು ತಾವು ತಿರುಗಿಸುತ್ತಿದ್ದೀರಿ. ಆ ಕಾರಣ ಇದನ್ನು ಸ್ವಲ್ಪ ತಿದ್ದುಪಡಿ ಮಾಡುವುದಕ್ಕೆ ಮೊದಲು ನಮ್ಮ ನಾಡಿನ ಇತಿಹಾಸವನ್ನು ತಾವು ನೋಡಿ.

ಅಧ್ಯಕ್ಷರು : ಈಗ ಒಂದು ಕೆಲಸ ಮಾಡೋಣ. ಈ ಕಮಿಟಿಗೆ ಇವರನ್ನು ಸಹ ಕರೆಯಿಸಿ ನೀವು ಅವರ ಅಭಿಪ್ರಾಯಗಳನ್ನು ತಿಳಿದುಕೊಂಡು ಇದರ ಬಗ್ಗೆ ಚರ್ಚೆ ಮಾಡಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಬ್ರಿಟಾಷರದ್ದು ಯಾವ ಕಾಲ? ಬೆಳವಡಿ ಮಲ್ಲಮನದು ಯಾವ ಕಾಲ?

ಶ್ರೀ ಶಿವಾನಂದ ಹೆಚ್.ಕೌಜಲಗಿ : ಬಾಂಬೇ ಯೂನಿವರ್ಸಿಟಿಯಲ್ಲಿ ಶಿವಾಜಿ ಬಗ್ಗೆ ಒಂದು ಬುಕ್ ಅನ್ನು ಪಬ್ಲಿಕ್ ಮಾಡಿದ್ದಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಪ್ರಶ್ನೆ ಹೀಗಿದೆ. ಬ್ರಿಟಿಷರ ದಾಸ್ಯ ಸಂಕೋಲೆ ವಿರುದ್ಧ ಹೋರಾಡಿ ಮಡಿದ ಬೆಳವಡಿ ಮಲ್ಲಮ್ಮ ಆ ಕಾಲಕ್ಕೆ ಕೇಳುತ್ತಿದ್ದೇನೆ. ಈ ಇತಿಹಾಸದ ವಿಚಾರ ಬೇಕಾದರೆ ಪೊಲ್ಯೂಶನ್ ಕಂಟ್ರೋಲ್ ಬೋರ್ಡ್‌ಗೆ ಕೊಡುವುದು ಚೆನ್ನಾಗಿರುತ್ತದೆ.

ಶ್ರೀ ಎಸ್. ಬಂಗಾರಪ್ಪ : ಒಬ್ಬ ವ್ಯಕ್ತಿ ಈ ರೀತಿ ಹೋರಾಟ ಮಾಡಿದ್ದರೆ ಚರಿತ್ರಾರ್ಹವಾದ ಗೌರವವಿರುತ್ತದೆ ಮತ್ತು ಅಂಥವರ ಪ್ರತಿಮೆ ಮಾಡಬಹುದು ಈ ರೀತಿ ಏನಾದರೂ ಇದ್ದರೆ ವಿವರಣೆಯನ್ನು ನೋಡಿ ಸರ್ಕಾರ ತೀರ್ಮಾನವನ್ನು ಮಾಡುತ್ತದೆ.

ಕೋಲಾರ ಮಂಡಲ ಪಂಚಾಯಿತಿಗೆ ಬರುವ 92 ಹಳ್ಳಿಗಳನ್ನು ಕೋಲಾರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಿಕೊಂಡಿರುವ ಬಗ್ಗೆ

2606 - ಶ್ರೀ ಎಂ. ನಾರಾಯಣಸ್ವಾಮಿ ಪರವಾಗಿ ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಮಂಡಲ ಪಂಚಾಯ್ತಿ ವ್ಯಾಪ್ತಿಗೆ ಬರುವ 92 ಹಳ್ಳಿಗಳನ್ನು ಕೋಲಾರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಿಕೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ ಈ ಹಳ್ಳಿಗಳನ್ನು ಎಂದಿನಿಂದ ಸೇರಿಸಿಕೊಳ್ಳಲಾಯಿತು ಮತ್ತು ಆ ಹಳ್ಳಿಗಳಾವುವು?

ಇ) ಈ ರೀತಿ ಹಳ್ಳಿಗಳನ್ನು ಸೇರಿಸಿಕೊಳ್ಳಲು ಕಾನೂನಿನಲ್ಲಿ ಅಧಿಕಾರವಿದೆಯೇ?

ಈ) ಈ ರೀತಿ ಹಳ್ಳಿಗಳನ್ನು ಸೇರಿಸಿಕೊಂಡಿರುವುದರಿಂದ ಆ ಹಳ್ಳಿಗಳಲ್ಲಿ ಯಾವ ಯಾವ ಸೌಕರ್ಯಗಳು ಕೆ.ಡಿ.ಎ.ದಿಂದ ಲಭ್ಯವಾಗುತ್ತದೆ.

ಶ್ರೀ ಕೆ.ಜೆ.ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಕರ್ನಾಟಕ ನಗರ ಅಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ ಪ್ರಕರಣ 2 (ಎಸ್)ರಂತೆ ಅಧಿಕಾರವಿದೆ.

ಈ) ನೀರು ಸರಬರಾಜು ನೈರ್ಮಲ್ಯ ಸಂಬಂಧವಾದ ಕಾಮಗಾರಿಗಳು ವಿದ್ಯುತ್ ಪೂರೈಕೆ ಮತ್ತು ಇತರೆ ಸೌಲಭ್ಯಗಳನ್ನೊಳಗೊಂಡ ಯೋಜಿತ ಬೆಳವಣಿಗೆ.

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೆ ಉತ್ತರದಲ್ಲಿ ಯಾವುದೇ ಗ್ರಾಮಗಳನ್ನು ಕೋಲಾರದ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಿಲ್ಲವೆಂದು ಹೇಳಿದ್ದಾರೆ. ಆದರೆ ಕೆಲವು ಹಳ್ಳಿಗಳನ್ನು ಸೇರಿಸಿದ್ದಾರೆ. ಆದರೆ ಅಲ್ಲಿ ಯಾವುದೇ ಅಭಿವೃದ್ಧಿಯಾಗುತ್ತಿಲ್ಲವೆಂದು ಮಾನ್ಯ ನಾರಾಯಣಸ್ವಾಮಿಯವರ ಒಂದು ದೂರು ಏನು ಇತ್ತೋ ಅದನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಮುಳಬಾಗಿಲು ತಾಲ್ಲೂಕಿನ ಗುಂಪು ಘರ್ಷಣೆ

2719 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಮುಳಬಾಗಿಲು ತಾಲ್ಲೂಕಿನಲ್ಲಿ 1990ನೇ ವರ್ಷದಲ್ಲಿ ನಡೆದ ಘರ್ಷಣೆಗಳ ಒಟ್ಟು ದಾಖಲಾಗಿರುವ ಮೊಕದ್ದಮೆಗಳೆಷ್ಟು?

ಆ) ಮಾನ್ಯ ಮುಖ್ಯ ಮಂತ್ರಿಗಳು ಲೋಕಸಭಾ ಚುನಾವಣೆ ಮುನ್ನಾ ಎಲ್ಲಾ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಆಶ್ವಾಸನೆ ಕೊಟ್ಟಿರುವ ಪ್ರಯುಕ್ತ